

## ಅಲ್ಲೊಂದು ನದಿ, ಪಿಸುಗುಡುವ ಬೆಟ್ಟ

# ಅಪೂರ್ವ ಪ್ರೇಮದ ದುರಂತ ಕಥೆ

**ಮಧ್ಯಪ್ರದೇಶದ ಮಾಳ್ವಾದ ಸುಲ್ತಾನ ಬಾಜ್‌ಬಹಾದ್ದೂರ್ ಹಾಗೂ ಆಕೆಯ ರಾಣಿ ರೂಪಮತಿಯ ಪ್ರೇಮವೃತ್ತಾಂತ ವಿಶ್ವದ ಅಪೂರ್ವ ಪ್ರೇಮಕಥನಗಳ ಸಾಲಿನಲ್ಲಿ ನಿಲ್ಲುವಂತಹದ್ದು. ಚಕ್ರವರ್ತಿ ಅಕ್ಬರನ ಆಸೆಯ ಕಂಗಳ ಕಿಚ್ಚಿನಿಂದ ಆ ದಂಪತಿ ಕೊನೆಯುಸಿರೆಳೆದರೂ, ಅವರ ಕಥೆ ಈಗಲೂ ಜನಮಾನಸದಲ್ಲಿ ಹಸಿರಾಗಿದೆ.**

■ **ಎಮ್.ಎನ್. ಜೋಶಿ**

ಮಧ್ಯಪ್ರದೇಶ ತನ್ನ ಭೌಗೋಳಿಕ ವಿಸ್ತಾರದಿಂದ ಮಾತ್ರವಲ್ಲ, ವೈವಿಧ್ಯಮಯ ಪ್ರವಾಸಿ ಕ್ಷೇತ್ರಗಳಿಂದಲೂ ಗಮನಸೆಳೆಯುವಂತಹ ರಾಜ್ಯ. ಚಾರಿತ್ರಿಕ ಹಾಗೂ ಪ್ರಾಕೃತಿಕ ಮಹತ್ವದ ಹಲವಾರು ಪ್ರೇಕ್ಷಣೀಯ ಸ್ಥಳಗಳು ಅಲ್ಲಿವೆ. ಅಂಥ ಸ್ಥಳಗಳಲ್ಲೊಂದು ರಾಣಿ ರೂಪಮತಿಯ ಅರಮನೆ. ನರ್ಮದಾ ನದಿಯ ಉತ್ತರ ಭಾಗದ ಮಾಂಡೊ ಬೆಟ್ಟದ ಮೇಲಿರುವ ಈ ಅರಮನೆಯು ತನ್ನ ವಾಸ್ತುಶಿಲ್ಪದಿಂದ ಗಮನಸೆಳೆಯುತ್ತದೆ. ರಾಣಿ ರೂಪಮತಿಯ ದುರಂತ ಪ್ರೇಮಕಥೆ ಆ ಅರಮನೆಯ ಸೌಂದರ್ಯದ ಹಿನ್ನೆಲೆಯಲ್ಲಿನ ಮತ್ತೊಂದು ಆಯಾಮವನ್ನು ತೋರುವಂತಿದೆ.

ಅದು ಹದಿನಾರನೇ ಶತಮಾನ. ಮಧ್ಯಪ್ರದೇಶದ ಮಾಳ್ವಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಾಜ್‌ಬಹಾದ್ದೂರ್ ಎಂಬ ಸುಲ್ತಾನ ಆಳ್ವಿಕೆ ನಡೆಸುತ್ತಿದ್ದ. ಕಲಾರಸಿಕನಾದ ಆತನಿಗೆ ಸಂಗೀತದ ಬಗ್ಗೆ ಅಪರಿಮಿತ ಪ್ರೀತಿ. ಇಂಥ ಸುಲ್ತಾನ ಒಮ್ಮೆ ಕಾಡಿಗೆ ಬೇಟೆಯಾಡಲು ಹೋದಾಗ ಯುವತಿಯೊಬ್ಬಳ ಹಾಡುಗಾರಿಕೆಯನ್ನು ಕೇಳಿ ಮರುಳಾದ. ಆಕೆಯೋ ಕುರಿಗಾಹಿ, ಹೆಸರು ರೂಪಮತಿ. ಹೆಸರಿಗೆ ತಕ್ಕಂತೆ ಸೌಂದರ್ಯವತಿಯೂ ಹೌದು.

ಹಾಡಿಗೆ ಮರುಳಾದ ಸುಲ್ತಾನ ಹಾಡುಗಾರ್ತಿಯ ಅಂದಕ್ಕೂ ಮರುಳಾದ. ಆಕೆಯಲ್ಲಿ ಪ್ರೇಮ ನಿವೇದನೆ ಮಾಡಿಕೊಂಡು, ತನ್ನನ್ನು ವಿವಾಹವಾಗಿ ಅರಮನೆಗೆ ಬರುವಂತೆ ಕೇಳಿಕೊಂಡ.

ರೂಪಮತಿ ಪ್ರಕೃತಿಯ ನಡುವೆ ಬೆಳೆದ ಹೆಣ್ಣು. ಆಕೆ ಸುಲ್ತಾನನ ಪ್ರೇಮವನ್ನು ಒಪ್ಪಿಕೊಂಡಳು. ಆದರೆ, ರಾಜಧಾನಿಗೆ ಬರಲಿಕ್ಕೆ ಷರತ್ತೊಂದನ್ನು ಒಡ್ಡಿದಳು. ಅದೇನೆಂದರೆ, ಪವಿತ್ರ ನರ್ಮದಾ ನದಿ ತನ್ನ ದೃಷ್ಟಿಗೆ ಸದಾ ಗೋಚರವಾಗುವಂತಿರಬೇಕು ಹಾಗೂ ನದಿಯನ್ನು ಪೂಜಿಸಲು ಸುಲ್ತಾನ ಅವಕಾಶ ಕಲ್ಪಿಸಬೇಕು. ಪ್ರೇಮವಶನಾದ ಸುಲ್ತಾನ ಒಪ್ಪಿಕೊಂಡ. ರೂಪವತಿಯೊಂದಿಗೆ ಮದುವೆಯಾಗಿ, ಆಕೆಯ ಕೋರಿಕೆಯಂತೆ ಮಾಂಡುವಿನ ಬೆಟ್ಟದ ಮೇಲೆ, ಒಂದು ಅರಮನೆ ಕಟ್ಟಿಸಿದ. ಆ ಅರಮನೆ ಪ್ರೇಮಿಗಳ ಪಾಲಿಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆನ್ನುವಂತಹ ಮಹಲಾಯಿತು.

ಅದು ಅಕ್ಬರ ಮಹಾಶಯನ ಆಳ್ವಿಕೆಯ ಕಾಲ. ದೇಶದ ವಾರ್ತೆಗಳೆಲ್ಲ ಚಕ್ರವರ್ತಿಯ ಕಿವಿಗೆ ತಲುಪುವುದು ಸಹಜವಷ್ಟೇ. ರಾಣಿ ರೂಪಮತಿಯ ಅನುಪಮ ಸೌಂದರ್ಯ ಹಾಗೂ ಆಕೆಯ ಇಂಪಾದ ಕಂಠದ ವಿಚಾರ ಚಕ್ರವರ್ತಿಗೆ ಮುಟ್ಟಿತು. ಲೋಕದ ಅಪೂರ್ವ ವಸ್ತು ವಿಶೇಷಗಳೆಲ್ಲ ಚಕ್ರವರ್ತಿಯ ಬಳಿಯಿರಬೇಕೆನ್ನುವುದು ಪ್ರಭುತ್ವದ ಮಾತು. ರೂಪಮತಿಯಂತಹ ಅಮೋಘ ರತ್ನ ತನ್ನ ಬಳಿ ಇರುವುದು ಸೂಕ್ತವೆಂದು ಅಕ್ಬರ್ ಭಾವಿಸಿದ. ತನ್ನ ಅರಮನೆಗೆ ರೂಪಮತಿಯನ್ನು ಕಳುಹಿಸಿಕೊಡುವಂತೆ ಬಾಜ್‌ಬಹಾದ್ದೂರನಿಗೆ ಚಕ್ರವರ್ತಿ ಓಲೆ ಬರೆಸಿದ.

ತನ್ನ ರಾಣಿಯನ್ನು ಬಯಸಿದ ಚಕ್ರವರ್ತಿಯ ಮೇಲೆ ಸುಲ್ತಾನ ಕೋಪಗೊಂಡ. 'ನೀವು ನಿಮ್ಮ ರಾಣಿಯರನ್ನು ನನ್ನ ಅಂತಃಪುರಕ್ಕೆ ಕಳುಹಿಸಿಕೊಡಿರಿ' ಎಂದು ಮಾರೋಲೆ ಬರೆಸಿದ.

ಬಾಜ್‌ಬಹಾದ್ದೂರನ ಉತ್ತರವನ್ನು ಓದಿ ಅಕ್ಬರ್ ಕೆಂಡಾಮಂಡಲನಾದ. ಸುಲ್ತಾನ ಮತ್ತು ಆತನ ಪತ್ನಿ ರಾಣಿ ರೂಪಮತಿಯನ್ನು ಬಂಧಿಸಿ, ಸುರಕ್ಷಿತವಾಗಿ ತಂದು ಒಪ್ಪಿಸುವಂತೆ ತನ್ನ ಸೇನಾಪತಿಗೆ ಆಜ್ಞಾಪಿಸಿದ.

ಬಾಜ್‌ಬಹಾದ್ದೂರನದು ಚಿಕ್ಕಸೇನೆ. ಅಕ್ಬರ ಚಕ್ರವರ್ತಿಯದು ಸಾಗರದಂತಹ ಸೇನೆ. ಮಹಾನ್ ಸೇನೆಯ ವಿರುದ್ಧ ಸುಲ್ತಾನನ ಪಡೆ ವೀರಾವೇಶದಿಂದ ಹೋರಾಡಿ ಸೋಲೊಪ್ಪಿಕೊಂಡಿತು. ಬಂಧಿತ ಬಾಜ್‌ಬಹಾದ್ದೂರನನ್ನು ಅಕ್ಬರ್ ಸೆರೆಯಲ್ಲಿಟ್ಟ. ಆದರೆ, ರಾಣಿ ರೂಪಮತಿ ಅಕ್ಬರನಿಗೆ ಒಲಿಯಲು ನಿರಾಕರಿಸಿದಳು. ವಜ್ರವನ್ನು ನುಂಗಿ ಜೀವ ಕಳೆದುಕೊಂಡಳು.

ರೂಪಮತಿಯ ಸಾವಿನ ಸುದ್ದಿ ತಿಳಿದು ಅಕ್ಬರನಿಗೆ ಬಹಳ ದುಃಖವಾಯಿತು. ಮಾಂಡುವಿನಲ್ಲಿ ರಾಣಿ ರೂಪಮತಿಯ ಸಮಾಧಿಯನ್ನು ನಿರ್ಮಿಸಿದನು. ಆತನಿಗೆ ತನ್ನ ತಪ್ಪಿನ ಅರಿವಾಗಿತು. ಸುಲ್ತಾನ ಬಾಜ್‌ಬಹಾದ್ದೂರನನ್ನು ಸೆರೆಯಿಂದ ಮುಕ್ತಗೊಳಿಸಿದ.

ಬಂಧಮುಕ್ತನಾದ ಸುಲ್ತಾನ ತನ್ನ ರಾಜಧಾನಿ ಸಾರಂಗಪುರಕ್ಕೆ ಬಂದಾಗ ಪ್ರೀತಿಯ ಪತ್ನಿಯ ಸಾವಿನ ಸುದ್ದಿ ಎದುರಾಯಿತು. ಅವಳ ಅನುರಾಗವನ್ನು ನೆನೆದು, ರಾಣಿಯಿಲ್ಲದ ತನ್ನ ಜೀವನಕ್ಕೆ ಅರ್ಥವಿಲ್ಲವೆಂದು ಭಾವಿಸಿದ. ಪತ್ನಿಯ ಸಮಾಧಿಗೆ ತಲೆ ಜಜ್ಜಿಕೊಂಡು ಸಾವನ್ನಪ್ಪಿದ.

ಅಕ್ಬರನಿಗೆ ಬಾಜ್‌ಬಹಾದ್ದೂರನ ದೇಹತ್ಯಾಗದ